ಕರ್ನಾಟಕ ಸರ್ಕಾರ

ನಿರ್ದೇಶಕರ ಕಛೇರಿ, ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ), 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-560012

ಇ-ಮೇಲ್:commissioner.pue@gmail.com ಸ್ಥಿರ ದೂರವಾಣಿ ಸಂ:080-23562033

ಸಂಖ್ಯೆ:1835564 :DPUE-EST30AS(NCOM)/4/2025 ದಿನಾಂಕ: 19-08-2025

**-: ಜ್ಞಾಪನ :-**

ವಿಷಯ: ಬಿ.ಇ.ಟಿ ಪದವಿ ಪೂರ್ವ ಕಾಲೇಜು, ಬಿಸ್ಮಿಲ್ಲಾ ನಗರ, ಬೆಂಗಳೂರು ಈ ಕಾಲೇಜಿಗೆ ವಿಜ್ಞಾನ ವಿಭಾಗದಲ್ಲಿ ಪಿ.ಸಿ.ಎಂ.ಸಿ.ಎಸ್ (33.34.35.41) ಸಂಯೋಜನೆ ಮಂಜೂರು ಮಾಡುವ ಕುರಿತು

ಉಲ್ಲೇಖ:
1. ಈ ಕಛೇರಿ ಸುತ್ತೋಲೆ ದಿನಾಂಕ: 30-04-2025
2. ಉಪ ನಿರ್ದೇಶಕರು, ಶಾಲಾ ಶಿಕ್ಷಣ ಇಲಾಖೆ, (ಪದವಿ ಪೂರ್ವ) ಬೆಂಗಳೂರು ದಕ್ಷಿಣ ಜಿಲ್ಲೆ, ಬೆಂಗಳೂರು ಇವರ ಪ್ರಸ್ತಾವನೆ ದಿನಾಂಕ : 05-07-2025.
3. ಈ ಕಛೇರಿಯ ಪತ್ರ ದಿನಾಂಕ: 01-08-2025.
4. ಪ್ರಾಂಶುಪಾಲರು, ಬಿ.ಇ.ಟಿ ಪದವಿ ಪೂರ್ವ ಕಾಲೇಜು, ಬಿಸ್ಮಿಲ್ಲಾ ನಗರ, ಬೆಂಗಳೂರು. ಇವರ ಪತ್ರ ದಿನಾಂಕ: 29-07-2025

******

**ಪ್ರಸ್ತಾವನೆ:-**

ಬಿ.ಇ.ಟಿ ಪದವಿ ಪೂರ್ವ ಕಾಲೇಜು, ಬಿಸ್ಮಿಲ್ಲಾ ನಗರ, ಬೆಂಗಳೂರು ಈ ಕಾಲೇಜಿಗೆ 2025-26 ನೇ ಶೈಕ್ಷಣಿಕ ಸಾಲಿನಿಂದ ವಿಜ್ಞಾನ ವಿಭಾಗದಲ್ಲಿ ಪಿ.ಸಿ.ಎಂ.ಸಿಎಸ್ ಸಂಯೋಜನೆಯನ್ನು ಪ್ರಾರಂಭಿಸಲು ಅನುಮತಿ ನೀಡುವ ಬಗ್ಗೆ ಜಿಲ್ಲಾ ಉಪ ನಿರ್ದೇಶಕರ ಮುಖಾಂತರ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ ಹೊಸದಾಗಿ ವಿಜ್ಞಾನ ವಿಭಾಗದಲ್ಲಿ ಪಿ.ಸಿ.ಎಂ.ಸಿಎಸ್ ಸಂಯೋಜನೆಯನ್ನು ಪ್ರಾರಂಭಿಸಲು ಅನುಮತಿ ನೀಡುವ ಸಂಬಂಧ ಈ ಕೆಳಕಂಡಂತೆ ಆದೇಶಿಸಿದೆ.

**ಆದೇಶ:-**

ಬಿ.ಇ.ಟಿ ಪದವಿ ಪೂರ್ವ ಕಾಲೇಜು, ಬಿಸ್ಮಿಲ್ಲಾ ನಗರ, ಬೆಂಗಳೂರು ಈ ಕಾಲೇಜಿಗೆ 2025-26 ನೇ ಶೈಕ್ಷಣಿಕ ಸಾಲಿನಿಂದ ವಿಜ್ಞಾನ ವಿಭಾಗದಲ್ಲಿ ಪಿ.ಸಿ.ಎಂ.ಸಿಎಸ್ ಸಂಯೋಜನೆಯನು ಹೊಸದಾಗಿ ಶಾಶ್ವತ ಅನುದಾನರಹಿತವಾಗಿ ಪ್ರಾರಂಭಿಸಲು ಈ ಕೆಳಕಂಡ ನಿಬಂಧನೆಗಳನ್ನು ಪಾಲಿಸುವ ಷರತ್ತಿಗೊಳಪಟ್ಟು ಅನುಮತಿ ನೀಡಲಾಗಿದೆ.

**ಷರತ್ತುಗಳು:-**

1. ಈ ಹೊಸ ಸಂಯೋಜನೆ / ಹೆಚ್ಚುವರಿ ವಿಭಾಗ ಮಂಜೂರಾತಿಯು ಶಾಶ್ವತ ಅನುದಾನರಹಿತವಾಗಿದ್ದು, ಆಡಳಿತ ಮಂಡಳಿಯು ಮುಂದೆ ಯಾವುದೇ ಸಂದರ್ಭದಲ್ಲಿ ಅನುದಾನ ಕೇಳುವುದಿಲ್ಲವೆಂದು ಪದವಿ ಪೂರ್ವ ಶಿಕ್ಷಣ ನಿರ್ದೇಶಕರಿಗೆ ಮುಚ್ಚಳಿಕೆ ಬರೆದುಕೊಡತಕ್ಕದ್ದು. ಮಂಜೂರಾದ ಹೆಚ್ಚುವರಿ ವಿಷಯ / ಸಂಯೋಜನೆಗೆ / ವಿಭಾಗಕ್ಕೆ ನೇಮಕ ಮಾಡಲು ಉಪನ್ಯಾಸಕರಿಗೆ / ಸಿಬ್ಬಂದಿಗೆ ಸರ್ಕಾರದಿಂದ ಯಾವುದೇ ಅನುದಾನ ಲಭ್ಯವಾಗುವುದಿಲ್ಲ.
2. ಅರ್ಹ ವಿದ್ಯಾರ್ಹತೆಯುಳ್ಳ ಉಪನ್ಯಾಸಕರುಗಳನ್ನು ಶಾಶ್ವತ ಅನುದಾನರಹಿತವಾಗಿ ಆಡಳಿತ ಮಂಡಳಿಯ ಜವಾಬ್ದಾರಿಯ ಮೇಲೆ ಮಾತ್ರ ನೇಮಿಸಿಕೊಳ್ಳತಕ್ಕದ್ದು.
3. ಹೊಸದಾಗಿ ತೆರೆಯಲು ಅನುಮತಿ ನೀಡುವ ವಿಷಯ / ವಿಭಾಗ / ಸಂಯೋಜನೆ ಮಂಜೂರಾತಿಯು ಶಾಶ್ವತ ಅನುದಾನರಹಿತವಾಗಿರುತ್ತದೆ.
4. ಸರ್ಕಾರವು ನಿಗಧಿಪಡಿಸಿದ ಶುಲ್ಕಗಳಿಗಿಂತ ಹೆಚ್ಚಿನ ಶುಲ್ಕ ಮತ್ತು ವಂತಿಕೆಗಳನ್ನು ವಸೂಲಿ ಮಾಡತಕ್ಕದ್ದಲ್ಲ.
5. ಸಂಬಂಧಪಟ್ಟ ಆಡಳಿತ ಮಂಡಳಿಗಳು ಶಿಕ್ಷಣ ಅಧಿನಿಯಮ 1983 ಹಾಗೂ ನಿಯಮಗಳ ಉಪಬಂಧಗಳ

Scanned with OKEN Scanner

ಎಲ್ಲಾ ಷರತ್ತುಗಳ ಮತ್ತು ನಿಬಂಧನೆಗಳನ್ನು ಪಾಲಿಸತಕ್ಕದ್ದು.

6. ಹೆಚ್ಚುವರಿ ವಿಷಯ / ಸಂಯೋಜನೆ ಮಂಜೂರಾತಿಯಿಂದ ಯಾವುದೇ ರೀತಿಯ ಅನಾರೋಗ್ಯಕರ ಸ್ಪರ್ಧೆ ಉಂಟಾಗಬಾರದು ಹಾಗೂ ಈಗಾಗಲೇ ಅಸ್ತಿತ್ವದಲ್ಲಿರುವ ಸುತ್ತಮುತ್ತಲಿನ ಕಾಲೇಜುಗಳ ಬೆಳವಣಿಗೆ ಹಾಗೂ ಅಭಿವೃದ್ಧಿಗೆ ದಕ್ಕೆ ಉಂಟಾಗಬಾರದು ಮತ್ತು ಈ ಬಗ್ಗೆ ಹೆಚ್ಚುವರಿ ವಿಭಾಗಗಳ ಸಂಬಂಧದಲ್ಲಿ ನೆರೆಹೊರೆಯ ಕಾಲೇಜುಗಳಿಂದ ಅಥವಾ ಪೋಷಕರಿಂದ ಅಕ್ಷೇಪಣೆಗಳು ಬಂದಲ್ಲಿ ಅವುಗಳನ್ನು ಗಂಭೀರವಾಗಿ ಪರಿಗಣಿಸಿ ನಿಯಮಾನುಸಾರ ಕ್ರಮ ವಹಿಸಲಾಗುತ್ತದೆ.
7. ಈ ಹೊಸ / ಹೆಚ್ಚುವರಿ ವಿಷಯ / ಸಂಯೋಜನೆ / ವಿಭಾಗಕ್ಕೆ ಅಗತ್ಯ ಸೌಲಭ್ಯಗಳನ್ನು ಹಾಗೂ ಕನಿಷ್ಠ ವಿದ್ಯಾರ್ಥಿಗಳ ಸಂಖ್ಯಾಬಲವನ್ನು ಕಾಯ್ದಿರಿಸಿಕೊಂಡಿರತಕ್ಕದ್ದು.
8. ಕಾಲೇಜಿನಲ್ಲಿ ಈಗಾಗಲೇ ಅಳವಡಿಸಿಕೊಂಡಿರುವ ವಿಭಾಗದಲ್ಲಿ ಕನಿಷ್ಠ 40 ವಿದ್ಯಾರ್ಥಿ ಸಂಖ್ಯಾಬಲವನ್ನು ಕಾಯ್ದಿರಿಸಿಕೊಂಡಿತಕ್ಕದ್ದು.
9. ಪ್ರತಿ ವಿಭಾಗಕ್ಕೆ 80 ಕ್ಕಿಂತಲೂ ಹೆಚ್ಚಿನ ವಿದ್ಯಾರ್ಥಿಗಳನ್ನು ದಾಖಲು ಮಾಡಿಕೊಳ್ಳಬಾರದು ಮತ್ತು ದಾಖಲಾತಿ ನಿಯಮವನ್ನು ತಪ್ಪದೇ ಪಾಲಿಸಲು ಸೂಚಿಸಿದೆ .
10. ಹೊಸ / ಹೆಚ್ಚುವರಿ ವಿಷಯ / ಸಂಯೋಜನೆ ತೆರೆಯಲು ಉದ್ದೇಶಿಸಿರುವ ಕಾಲೇಜಿನ 8 ಕಿ.ಮೀ. ವ್ಯಾಪ್ತಿಯಲ್ಲಿರುವ ಕಾಲೇಜುಗಳಲ್ಲಿ ಸದರಿ ಸಂಯೋಜನೆ ಇದ್ದಲ್ಲಿ ವಿಷಯ / ವಿಭಾಗಗಳಲ್ಲಿ ವಿದ್ಯಾರ್ಥಿ ಸಂಖ್ಯೆ ಗರಿಷ್ಠ ಹಂತ ತಲುಪಿರಬೇಕು.
11. ಹೊಸ ಸಂಯೋಜನೆ / ಹೆಚ್ಚುವರಿ ವಿಭಾಗ ತೆರೆಯಬೇಕಾದರೆ ವಿಭಾಗಕ್ಕೊಂದರಂತೆ ಕನಿಷ್ಠ 22*30 ಅಳತೆಯ ಹೆಚ್ಚುವರಿ ಕೊಠಡಿ ಇರಬೇಕು.
12. ಹೊಸದಾಗಿ ತೆರೆಯಲು ಅನುಮತಿ ನೀಡುವ ವಿಷಯ / ವಿಭಾಗ / ಸಂಯೋಜನೆ ಅನುಮತಿ ನೀಡಿದ ದಿನಾಂಕದಿಂದ ಮೂರು ಶೈಕ್ಷಣಿಕ ವರ್ಷದಲ್ಲಿ ಕನಿಷ್ಠ ವಿದ್ಯಾರ್ಥಿಗಳ ಸಂಖ್ಯಾಬಲ 40ನ್ನು ತಲುಪಬೇಕು. ಆ ರೀತಿ ಸಂಖ್ಯಾಬಲ ಹೊಂದದಿದ್ದಲ್ಲಿ ನೀಡಲಾದ ಅನುಮತಿಯನ್ನು ರದ್ದುಪಡಿಸಲಾಗುವುದು.
13. ಮಾನ್ಯ ಸರ್ವೋಚ್ಚ ನ್ಯಾಯಾಲಯವು ರಿಟ್ ಅರ್ಜಿ (ಸಿವಿಲ್) ಸಂಖ್ಯೆ: 483/2004 ರಲ್ಲಿನ ದಿನಾಂಕ: 13-04-2009ರ ತೀರ್ಪಿನಲ್ಲಿ ಶಾಲಾ ಕಾಲೇಜುಗಳ ಕಟ್ಟಡವು ಸುರಕ್ಷಿತ ಮತ್ತು ಎಲ್ಲಾ ಕೋನಗಳಿಂದ ಸುಭದ್ರವಾಗಿದೆ ಎಂಬುದನ್ನು ಮತ್ತು ನ್ಯಾಷನಲ್ ಬಿಲ್ಡಿಂಗ್ ಕೋಡ್ ಆಫ್ ಇಂಡಿಯಾದಲ್ಲಿನ ಸುರಕ್ಷತಾ ನಿಬಂಧನೆಗಳನ್ವಯ ಕಟ್ಟಡ ನಿರ್ಮಿಸಿರುವುದರ ಕುರಿತು ಸಕ್ಷಮ ಪ್ರಾಧಿಕಾರದಿಂದ ಪ್ರಮಾಣ ಪತ್ರ ಪಡೆದಿರತಕ್ಕದ್ದು.
14. ಶಾಲಾ ಕಾಲೇಜುಗಳ ಕಟ್ಟಡದಲ್ಲಿ ಅಗ್ನಿನಿವಾರಣೆ ಮತ್ತು ಅಗ್ನಿಶಮನ ಮುನ್ನೆಚ್ಚರಿಕೆ ಕ್ರಮಗಳನ್ನು ಅಳವಡಿಸಿರುವ ಬಗ್ಗೆ ಹಾಗೂ ಅಗ್ನಿಶಾಮಕ ಉಪಕರಣಗಳನ್ನು ಅಳವಡಿಸಿಕೊಂಡಿರುವ ಬಗ್ಗೆ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆಯ ಸಲಹಾ ಪತ್ರ ಮತ್ತು ಸಮಾಪನಾ ಪ್ರಮಾಣ ಪತ್ರ ಪಡೆದಿರತಕ್ಕದ್ದು.

Digitally signed by K VIDYA KUMARI
Date: 19-08-2025 17:51:25

ನಿರ್ದೇಶಕರು,
ಶಾಲಾ ಶಿಕ್ಷಣ ಇಲಾಖೆ(ಪದವಿ ಪೂರ್ವ)

ಇವರಿಗೆ,
ಪ್ರಾಂಶುಪಾಲರು, ಬಿ.ಇ.ಟಿ ಪದವಿ ಪೂರ್ವ ಕಾಲೇಜು, [illegible], ಬೆಂಗಳೂರು.

ಪ್ರತಿಗಳು:-

1. ಉಪ ನಿರ್ದೇಶಕರು, ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) ಬೆಂಗಳೂರು ದಕ್ಷಿಣ ಜಿಲ್ಲೆ, ಬೆಂಗಳೂರು.
2. ಸಹಾಯಕ ನಿರ್ದೇಶಕರು, ಗಣಕಶಾಖೆ, ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) ಬೆಂಗಳೂರು- ಮುಂದಿನ ಕ್ರಮಕ್ಕಾಗಿ.
3. ಹೆಚ್ಚುವರಿ / ಕಚೇರಿ ಪ್ರತಿ.

Scanned with OKEN Scanner